# ಕರ್ಮ ಸಮರ್ಪಣೆ ಮಾಡುವ ರೀತಿ

## (ಶ್ರೀಮತ್ ಜಗನ್ನಾಥದಾಸರ ಶ್ರೀಹರಿಕಥಾಮೃತಸಾರ ಪ್ರಕಾರ)









(ದಯವಿಟ್ಟು ದಿನಾಗಲೂ ಒಮ್ಮೆ ಓದಿ ಸಮರ್ಪಣೆ ಮಾಡಿ)

**ಹೇ ಸ್ವಾಮೀ! ತತ್ವಾಭಿಮಾನಿಗಳ ಅಂತರ್ಯಾಮಿ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಬಿಂಬಮೂರ್ತೇ! ಹಿಂದಿನ ಸಕಲ ಜನ್ಮಗಳಲ್ಲಿ ಹಾಗೂ ಮುಂದಿನ ಸಕಲ ಜನ್ಮಗಳಲ್ಲಿ ಹಾಗೆಯೇ ಈ ಜನ್ಮದ ಮೊದಲನೇ ಕ್ಷಣ ಮೊದಲುಗೊಂಡು ಕೊನೆಯ ಕ್ಷಣದವರೆಗೂ, ನನ್ನ ದೇಹ, ಇಂದ್ರಿಯ, ಮನಸ್ಸು, ಪ್ರಾಣಗಳಲ್ಲಿ ನೀನೇ ನಿಂತು ತತ್ವಾಭಿಮಾನಿ ದೇವ ದೈತ್ಯರ ಮೂಲಕ, ಜಾಗ್ರತ್, ಸ್ವಪ್ನ, ಸುಷುಪ್ತಿಗಳಲ್ಲಿ, ಮನೋ-ವಾಕ್-ಕಾಯದಿಂದ, ಸಕಲ ಇಂದ್ರಿಯಗಳ ಮೂಲಕ, ನನ್ನಿಂದ ಒಳ್ಳೆಯ ಹಾಗೂ ಕೆಟ್ಟ ಕೆಲಸಗಳನ್ನು, ನನ್ನ ಹಿಂದಿನ ಕರ್ಮಾನುಸಾರವೇ, ಮಾಡಿಸಿದ್ದೀಯ, ಮಾಡಿಸುತ್ತಾ ಇದ್ದೀಯ ಹಾಗೂ ಮಾಡಿಸುತ್ತೀಯ.**

**ಆದರೆ ಆ ಎಲ್ಲಾ ಕರ್ಮಗಳು ನಿನ್ನಿಂದ ನಡೆಯುವಾಗ, ನಿನ್ನ ಎಚ್ಚರವಿಲ್ಲದೇ ಇರೋದರಿಂದ, ನಾನೇ ಮಾಡಿದೆ ಎನ್ನುವ ಭಾವನೆ ಬಂದಿದೆ. ಇದರಿಂದ, ನನ್ನಲ್ಲಿ ಇಲ್ಲದ ಸ್ವತಂತ್ರ ಕರ್ತೃತ್ವ ನಾನು ಹೇಳಿಕೊಂಡಿದ್ದಾಯಿತು. ಸ್ವತಂತ್ರ ಕರ್ತೃತ್ವ ನಿನ್ನ ಸೊತ್ತು. ನಿನ್ನ ಮರೆತು ನಾನೇ ಮಾಡಿದೆ ಎಂದಾಗಲಿ ಅಥವಾ ನಾನು ಮಾಡಿದೆ ಎಂದಾಗಲಿ ನನ್ನ ಮನಸ್ಸಿಗೆ ಬಂದಿದ್ದರಿಂದ ನಿನ್ನ ಸ್ವಾತಂತ್ರ್ಯ ನನ್ನಲ್ಲಿ ಇದ್ದಂತೆ ಹೇಳಿಕೊಂಡಿದ್ದಾಯಿತು. ಅಂದರೆ, ನಿನ್ನ ಸ್ವಾತಂತ್ರ್ಯ ಕದ್ದಿದ್ದಾಯಿತು. ನಾನೇ ದೇವರೆಂದು ಹೇಳಿಕೊಂಡಂತೆ ಆಯಿತು. ಯಾರು ನಾನೇ ದೇವರು ಎಂದು ಹೇಳುತ್ತಾರೋ ಅವರು ನಾನೇ ಲಕ್ಷ್ಮೀಪತಿ ಎಂದು ಹೇಳಿಕೊಂಡಂತೆ ಅಲ್ಲವೇ!**

**ಜನ್ಮ ಜನ್ಮಗಳಿಂದ ಈ ಕ್ಷಣದವರೆಗೂ ಪ್ರತಿಯೊಂದು ಕರ್ಮದಲ್ಲೂ ಹೀಗೆಯೇ ನಿನ್ನ ಮರೆತು, ನಾ ಮಾಡಿದೆ ಎಂದು ನನ್ನ ಮನಸ್ಸಿಗೆ ಬರುತ್ತಾ ಇದೆ. ಈ ರೀತಿಯಲ್ಲಿ ಸದಾ ನಿನ್ನ ಸ್ವಾತಂತ್ರ್ಯ ಕದ್ದ ದೋಷ ನನ್ನ ಕಾಡುತ್ತಾ, ಎಲ್ಲಾ ದುಃಖಗಳಿಗೆ ಹಾಗೂ ನಿನ್ನ ಮರೆವಿಗೂ ಕಾರಣವಾಗಿ ನನ್ನ ಕಾಡುತ್ತಾ ಇದೆ. ಇದರಿಂದ ಬಿಡುಗಡೆ ನೀನೇ ಮಾಡಬೇಕು. ಶರಣಾಗಿದ್ದೇನೆ ದಯದಿಂದ ಸಲಹೋ ಸ್ವಾಮೀ!**

**ನಿನ್ನ ಮರೆತು ನಾನು ಮಾಡಿದೆ ಎಂಬ ಭಾವನೆಯಿಂದ, ನಿನ್ನ ಸ್ವಾತಂತ್ರ್ಯ ಕದ್ದಂತಾಗಿ, ಆ ದೋಷದ ಮೂಲಕ ನಾನು ಗಳಿಸಿದ, ಒಳ್ಳೆಯ ಹಾಗೂ ಕೆಟ್ಟ ಕರ್ಮಗಳ ಫಲವೆಲ್ಲಾ "ಕಳ್ಳ ಕದ್ದು ಸಂಪಾದಿಸಿದ ಧನದಂತೆ" ಆಯಿತು. ನಿನ್ನ ಪಾದಕ್ಕೆ ಈ ಸಂಪತ್ತೆಲ್ಲಾ "ನಿನ್ನ ಅಧೀನವೆಂದು" ಸಮರ್ಪಣೆ ಮಾಡುತ್ತಿದ್ದೇನೆ.**

**ಪು.ತಿ.ನೋ.**

ಈ ಶುಭ ಅಶುಭ ಕರ್ಮಗಳ ಫಲ ನಾನು ಉಣಬೇಕಾಗಿದ್ದು. ನೀನಲ್ಲ. ಕರ್ಮದ ಲೇಪ ನಿನಗಿಲ್ಲ. ಆದರೇ ಸ್ವತಂತ್ರವಾಗಿ ಉಣ್ಣುವ ಶಕ್ತಿ ನನಗಿಲ್ಲ. ನೀನು ಉಣಿಸಿದರೇ ಉಂಟು, ಇಲ್ಲದಿದ್ದರೇ ಇಲ್ಲ. ಇದರಲ್ಲಿ ಯಾವುದನ್ನು ಉಣಿಸಬೇಕೋ ನಿನಗೇ ಗೊತ್ತು.

ನಿನ್ನ ಸ್ವಾತಂತ್ರ್ಯ ಕದ್ದ ದೋಷದಿಂದ ಪಾರುಮಾಡು ಹರಿಯೇ!

ಇದಾದರೂ, ನಿನ್ನ ದಾಸರಾದ ಶ್ರೀಮಜ್ಜಗನ್ನಾಥದಾಸರೆಂಬ ಗುರುಗಳ, ತತ್ವಾಭಿಮಾನಿಗಳ ಮೂಲಕ ನೀನೇ ಕರುಣಿಸಿದ ಜ್ಞಾನದಿಂದ, ಸಮರ್ಪಣೆ ಮಾಡಬೇಕೆಂಬ ನಿನ್ನ ಬಲವತ್ತರ ಪ್ರೇರಣೆಯಿಂದ, ನೀನೇ ನಡೆಸಿದ ನನ್ನ ಪ್ರಯತ್ನದ ಮೂಲಕ ನಿನ್ನಿಂದಲೇ, ನಿನ್ನಿಂದಲೇ, ನಿನ್ನಿಂದಲೇ ನಾನು ಸಮರ್ಪಣೆ ಮಾಡಿದ್ದಾಯಿತು. ಈ ಜ್ಞಾನ ಸದಾ ದಯಪಾಲಿಸು ಹರಿಯೇ!

ಜೀವನಾದ ನನಗೆ ಕರ್ತೃತ್ವವೆಂಬ ಧರ್ಮ ಸದಾ ಇದ್ದೇ ಇದೆ. ನನ್ನಿಂದ ಪ್ರಯತ್ನ ಆಗಲೇಬೇಕು. ಆದರೆ ಆ ಪ್ರಯತ್ನ ನೀನು ಮಾಡಿಸಿದರೇನೇ ನನ್ನಿಂದ ನಡೆಯುತ್ತೆ. ಇಲ್ಲದಿದ್ದರೇ ಉಸಿರಾಟವನ್ನೂ ನಾನಾಗಿ ಮಾಡಲಾರೆನೆಂಬ ಜ್ಞಾನ ಸದಾ ಕೊಡು ಹರಿಯೇ!

ನನಗೆ ಎಳ್ಳಷ್ಟೂ ಸ್ವಾತಂತ್ರ್ಯವಿಲ್ಲವೆಂಬ ಜ್ಞಾನ ಕೊಡು. ದಾಸರು ತಿಳಿಸಿದ ದತ್ತ ಸ್ವಾತಂತ್ರ್ಯವೆಂದರೆ "ಸ್ವಾತಂತ್ರ್ಯ ನಿನ್ನ ಗುಣ. ನಿನ್ನಿಂದ ಬೇರೇ ಅಲ್ಲ. ಅದನ್ನು ಇನ್ನೊಬ್ಬರಿಗೆ ಕೊಡುವುದಕ್ಕೂ ಆಗುವುದಿಲ್ಲ. ಕೇವಲ ನೀನೇ ಜೀವರ ಸಕಲೇಂದ್ರಿಯಗಳಲ್ಲಿ, ನಿನ್ನ ಇಂದ್ರಿಯಗಳನ್ನಿಟ್ಟು ವ್ಯಾಪಿಸಿ ನಿಂತು, ಶಕ್ತಿ ಪ್ರಕಟ ಮಾಡಿ, ಅವರಿಂದ ಸಕಲ ಕಾರ್ಯ ಮಾಡಿಸುತ್ತೀಯ. ನಿನ್ನಿಂದಾಗಿ ಜೀವರಿಗೆ ಚಟುವಟಿಕೆ ಬರುತ್ತಾ ಇದೆ. ತಾವಾಗಿ ಜೀವರು ಉಸಿರಾಟಕ್ಕೂ ಸಮರ್ಥರಲ್ಲ" ಎಂದು ಅರ್ಥ. ಈ ಚಿಂತನೆ ಸದಾ ಕೊಡು ಸ್ವಾಮೀ!

ಜೀವನಿಗೆ ಸ್ವಲ್ಪವಾದರೂ ಸ್ವಾತಂತ್ರ್ಯ ಇಲ್ಲದಿದ್ದರೇ ವಿಧಿ ನಿಷೇಧ ತಾನಾಗಿ ಗ್ರಹಣ ಮಾಡಲಾರ. ಶಾಸ್ತ್ರ ವ್ಯರ್ಥವಾಗುತ್ತೆ. ಆದ್ದರಿಂದ ವಿಧಿ ನಿಷೇಧಾದಿಗಳು ಗ್ರಹಣ ಮಾಡುವಷ್ಟಾದರೂ ಸ್ವಲ್ಪ ಸ್ವಾತಂತ್ರ್ಯ ಜೀವನಿಗೆ ಒಪ್ಪಬೇಕೆಂದಾಗಲೀ, ನೀ ಕೊಟ್ಟ ದತ್ತಸ್ವಾತಂತ್ರ್ಯವನ್ನು ಬಳಸಿಕೊಂಡು ನನ್ನ ಮನ ಬಂದಂತೆ ಮಾಡಲಿಕ್ಕೆ ಆಗುತ್ತೆ ಎಂದಾಗಲೀ, ಈ ರೀತಿಯಾದ ತಪ್ಪು ತಿಳುವಳಿಕೆ ಕೊಡಬೇಡ ಹರಿಯೇ!

ಜೀವನಿಗೆ ಸ್ವಲ್ಪವೂ ಸ್ವಾತಂತ್ರ್ಯ ಇಲ್ಲದಿದ್ದರೂ ಒಳಗೆ ನೀನೇ ಇದ್ದು ವಿಧಿ ನಿಷೇಧಾದಿಗಳ ಗ್ರಹಣ ಮಾಡಿಸುತ್ತೀಯ. ಇಚ್ಛೆಯೂ ನೀನೇ ಕೊಡುತ್ತೀಯ (ಜ್ಞಾನ ಇಚ್ಛಾದಿಕಂ ಹರಿರೇವ ಉತ್ಪಾದಯತಿ), ಪ್ರಯತ್ನವಾದರೂ ನೀನೇ ಮಾಡಿಸುತ್ತೀಯ (ಕಾರಿತಮೇವ ಈಶ್ವರೇಣ) ಎನ್ನುವ ಗೀತಾ ತಾತ್ಪರ್ಯ, ಭಾಷ್ಯಾದಿಗಳ ಅನುಸಾರ "ಜೀವನಿಗೆ ಸ್ವಲ್ಪವೂ ಸ್ವಾತಂತ್ರ್ಯ ಇಲ್ಲದಿದ್ದರೂ ವಿಧಿ ನಿಷೇಧ ಶಾಸ್ತ್ರ ವ್ಯರ್ಥವಾಗುವುದಿಲ್ಲ"ವೆಂಬ ಸರಿಯಾದ ತಿಳುವಳಿಕೆ ಕೊಟ್ಟು ರಕ್ಷಿಸು ಹರಿಯೇ!

ನೀನು ನಿನ್ನಿಂದ ಅಭಿನ್ನವಾದ ಸ್ವಾತಂತ್ರ್ಯ ಜೀವರಿಗೆ ಕೊಡುವುದಿಲ್ಲವೆಂದೂ "ವಿಷ್ಣು ರಹಸ್ಯ"ದಲ್ಲಿ ಹೇಳಿದ್ದನ್ನೇ, ಶ್ರೀ ದಾಸರು, "ಯಾವ ಸ್ವತಂತ್ರ ಚಟುವಟಿಕೆ ಇಲ್ಲದ ಜೀವರ ಒಳಗೆ, ನೀನೇ ಹೊಕ್ಕು, ಪ್ರಕಟ ಮಾಡುವ ಶಕ್ತಿ ವಿಶೇಷದ ಮೂಲಕ, ಅವರ ಕ್ರಿಯೆಗಳನ್ನು ಮಾಡಿಸುವುದೇ ದತ್ತಸ್ವಾತಂತ್ರ್ಯ"ವೆಂದು ಹೇಳಿದ್ದಾರೆಂಬ ನಿಜ ತತ್ವಜ್ಞಾನ ಕೊಡು.

ದತ್ತಸ್ವಾತಂತ್ರ್ಯವನ್ನು ಬಳಸಿಕೊಂಡು ನಾನಾಗಿ ಎಲ್ಲಾ ಮಾಡಬಹುದೆಂಬ ತಪ್ಪು ತಿಳುವಳಿಕೆ ಕಡಿದುಹಾಕು ಹರಿಯೇ! ಇಂಥಾ ಜ್ಞಾನವನ್ನು ಅನುಷ್ಠಾನದಲ್ಲಿಟ್ಟ ಸಜ್ಜನರ ಸಂಗ ದಯಪಾಲಿಸು ಸ್ವಾಮೀ!

ಶ್ರೀ ಜಗನ್ನಾಥದಾಸರನ್ನು ನಮಗೆ ದಯಪಾಲಿಸಿ, ಅವರ ಮೂಲಕ ಈ ಜ್ಞಾನ ನಮಗೆ ಕೊಟ್ಟ ನಿನ್ನ ಕರುಣೆಗೆ ನಮೋ ನಮಃ.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಸಂಗ್ರಹ : ಕರ್ನೂಲು ಶ್ರೀನಿವಾಸಾಚಾರ್ಯ.